ಬೋಪಯ್ಯನವರದ್ದು, ಮುಖ್ಯಮಂತ್ರಿ ಪರಿಹಾರನಿಧಿಯಿಂದ ಯಾವ್ಯಾವ ಚಿಕಿತ್ಸೆಗೆ ಕೊಡುತ್ತಾರೆ ಎಂದು ಕೇಳಿದ್ದಾರೆ.

ಅಧ್ಯಕ್ಷರು : ಮುಖ್ಯಮಂತ್ರಿಗಳ ಪರಿಹಾರ ನಿಧಿಯದಕ್ಕೆ ಇಲ್ಲಿ ಉತ್ತರಗಳನ್ನು ಹುಡುಕಿದರೂ ಸಾಧ್ಯವಾಗುವುದಿಲ್ಲವೆನ್ನುವ ದೃಷ್ಟಿಯೂ ಇದರಲ್ಲಿ ಇದೆ. ಆ ದೃಷ್ಟಿಯಿಂದ ಹೀಗಾಗಿದೆ.. ನೋಡೋಣ. .

ಶ್ರೀ ಜಗದೀಶ್ ಶೆಟ್ಟರ್ : ಯಾವ್ಯಾವ ಚಿಕಿತ್ಸೆಗೆ ಪರಿಹಾರ ಧನ ಕೊಡುತ್ತೀರಿ ಇಲ್ಲಿಯೇ ಇರುವಂತಹ ಉತ್ತರ ಬಹಳ ಮುಖ್ಯವಾದ ಪ್ರಶ್ನೆ ಇದು, ಇದಕ್ಕೂ ಸರ್ಕಾರ ಉತ್ತರ ಕೊಡುವುದಿಲ್ಲಾವೆಂದರೆ ಮತ್ತೆ ಯಾವ ಪ್ರಶ್ನೆಗೆ ಇವರು ಉತ್ತರ ಕೊಡುತ್ತಾರೆ?

ಅಧ್ಯಕ್ಷರು : ಆಯಿತು ಆಯಿತು ಬಿಡಿ, ಮಾನ್ಯ ದೊಡ್ಡನಗೌಡ ಗುಂಡನಗೌಡ ಪಾಟೀಲರು ತಾವು ಪ್ರಶ್ನೆ ಕೇಳಿ.

ಇಳಕಲ್, ಲಿಂಗಸಗೂರು ಮತ್ತು ಕುಷ್ಟಗಿ ತಾಲ್ಲೂಕು ಗಳಲ್ಲಿ ಗ್ರಾಮೀಣ ಸಾರಿಗೆ.

634 (6597)ಶ್ರೀ ದೊಡ್ಡನ ಗೌಡ ಗುಂಡನ ಗೌಡ ಪಾಟೀಲ್(ಹುನಗುಂದ) : ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಇಳಕಲ್, ಲಿಂಗಸುಗೂರು ಮತ್ತು ಕುಷ್ಟಗಿ ಡಿಪೋಗಳಲ್ಲಿ ಮಂಜೂರಾಗಿರುವ ಮತ್ತು ಚಾಲ್ತಿಯಲ್ಲಿರುವ ಬಸ್ಸುಗಳ ಸಂಖ್ಯೆ ಎಷ್ಟು ಹಾಗೂ ಅವು ಯಾವ ಯಾವ ಮಾರ್ಗಗಳಲ್ಲಿ ಸಂಚರಿಸುತ್ತಿವೆ;

ಆ. ಹುನಗುಂದ, ಲಿಂಗಸುಗೂರು ಮತ್ತು ಕುಷ್ಟಗಿ ತಾಲ್ಲೂಕುಗಳ ಅನೇಕ ಹಳ್ಳಿಗಳು ಇಂದಿಗೂ ಸಾರಿಗೆ ಸೌಲಭ್ಯ ಪಡೆದುಕೊಳ್ಳದಿರುವುದು, ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ. ಹಾಗಿದ್ದಲ್ಲಿ, ಸರ್ಕಾರದ ಕ್ರಮ ಗಳೇನು;

ಈ. ಇಳಕಲ್, ಕುಷ್ಟಗಿ ಮತ್ತು ಲಿಂಗಸುಗೂರು ಬಸ್ಸು ನಿಲ್ದಾಣಗಳಲ್ಲಿ ಪ್ರಯಾಣಿಕರ ಮೂಲಭೂತ ಸೌಕರ್ಯಗಳು ಸರಿಯಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ. ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಳ್ಳಲಾಗುವ ಕ್ರಮವೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು) ಪರವಾಗಿ ಶ್ರೀ ಆರ್. ವಿ. ದೇಶಪಾಂಡೆ

ಅ. ಇಳಕಲ್ 84
ಲಿಂಗಸುಗೂರು 99
ಕುಷ್ಟಗಿ 64

ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ. ಲಿಂಗಸುಗೂರು ಮತ್ತು ಕುಷ್ಟಗಿ ತಾಲ್ಲೂಕುಗಳಲ್ಲಿ ರಸ್ತೆ ಸರಿಯಿಲ್ಲದ ಕೆಲವು ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಲು ಸಾಧ್ಯವಾಗಿರುವುದಿಲ್ಲ.

ಇ. ವಾಹನ ಸಂಚಾರಕ್ಕೆ ಯೋಗ್ಯವಾದ ರಸ್ತೆ ಸಂಪರ್ಕ ಒದಗಿಸಿದ ತಕ್ಷಣ ಸಾರಿಗೆ ಸೌಲಭ್ಯ ಕಲ್ಪಿಸಲಾಗುವುದು.

ಈ. ಮೂಲಭೂತ ಸೌಕರ್ಯಗಳನ್ನು ಸುಸ್ಥಿತಿಯಲ್ಲಿಡಲಾಗಿದೆ.

ಉ. ಪ್ರಯಾಣಿಕರ ಸಾಂದ್ರತೆಗನುಗುಣವಾಗಿ ಇನ್ನೂ ಹೆಚ್ಚಿನ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು.

ಅನುಬಂಧ

ಇಳಕಲ್ ಘಟಕದ ಮಾರ್ಗಗಳ ವಿವರ

ಕ್ರಮ ಸಂಖ್ಯೆ	ಮಾರ್ಗ	
	ಯಿಂದ	ವರೆಗೆ
1	2	3
1	ಇಳಕಲ್	ಮಿರಜ್
2.	ಇಳಕಲ್	ಸಾಂಗ್ಲಿ
3.	ಇಳಕಲ್	ಗುಡೂರ
4.	ಇಳಕಲ್	ಮೈಸೂರು
5.	ಇಳಕಲ್	ಕಮಲದಿನ್ನಿ
6.	ಇಳಕಲ್	ಚಿಂತಕಮಲದಿನ್ನಿ
7.	ಇಳಕಲ್	ನಾಗರಹಾಳ
8.	ಇಳಕಲ್	ಇಚಲಕರಂಜಿ
9.	ಇಳಕಲ್	ಮುಗಳಕೋಡ
10.	ಇಳಕಲ್	ಮಾಮನಾ
11.	ಇಳಕಲ್	ವಾಸ್ಕೋ
12.	ಇಳಕಲ್	ಬಾದಾಮಿ
13.	ಇಳಕಲ್	ಗೊಜನಾಳ
14.	ಇಳಕಲ್	ಬೆಂಗಳೂರು
15.	ಇಳಕಲ್	ರಾಯಭಾಗ
16.	ಇಳಕಲ್	ಲಿಂಗಸುಗೂರ
17.	ಇಳಕಲ್	ಬೂದಿಹಾಲ
18.	ಇಳಕಲ್	ಬಿಜಾಪುರ
19.	ಇಳಕಲ್	ಮಂಟಗೇರಿ
20.	ಇಳಕಲ್	ಐದಾಪುರ
21.	ಇಳಕಲ್	ಮ್ಯಾಗೇರಿ
22.	ಇಳಕಲ್	ಹುಬ್ಬಳ್ಳಿ
23.	ಇಳಕಲ್	ಅಂಕಲಮಠ
24.	ಇಳಕಲ್	ಗುಡೂರು
25.	ಇಳಕಲ್	ದಮ್ಮೂರ
26.	ಇಳಕಲ್	ಮಂಗಳೂರು
27.	ಇಳಕಲ್	ಸೋಮಲಾಪುರ
28.	ಇಳಕಲ್	ಕೊಲ್ಲಾಪುರ

1	2	3
29.	ಇಳಕಲ್	ಬೆನಕನದೋಣಿ
30.	ಇಳಕಲ್	ಶಹಾಪುರ
31.	ಇಳಕಲ್	ತಿಮ್ಮಾಪುರ
32.	ಇಳಕಲ್	ಕೃಷ್ಣಾಪುರ
33.	ಇಳಕಲ್	ಬಾಗಲಕೋಟೆ
34.	ಇಳಕಲ್	ಚಿತ್ತವಾಡಗಿ
35.	ಇಳಕಲ್	ಮುಂಬಯಿ
36.	ಇಳಕಲ್	ಶಿರಡಿ
37.	ಇಳಕಲ್	ಗುನದಾಳ
38.	ಇಳಕಲ್	ಸಜ್ಜಲಗುಡ್ಡ
39.	ಇಳಕಲ್	ಸತಾರಾ
40.	ಇಳಕಲ್	ಸೊಲ್ಲಾಪುರ
41.	ಇಳಕಲ್	ಪಣಜಿ
42.	ಇಳಕಲ್	ಮಂತ್ರಾಲಯ
43.	ಇಳಕಲ್	ಹುನಗುಂದ
44.	ಇಳಕಲ್	ಸಂಗಮ
45.	ಇಳಕಲ್	ಕರಡಿ
46.	ಇಳಕಲ್	ಅಂಕನಾಳ
47.	ಇಳಕಲ್	ಕಮತಗಿ
48.	ಇಳಕಲ್	ಗಜೇಂದ್ರ ಗಡ
49.	ಇಳಕಲ್	ತಾವರೆಗೇರಾ
50.	ಇಳಕಲ್	ಬೆನಕನದಿನ್ನಿ
51.	ಇಳಕಲ್	ಮುದ್ದೇಬಿಹಾಳ
52.	ಇಳಕಲ್	ಸಂಗಮಬೆಂಗಳೂರು
53.	ಇಳಕಲ್	ಧರ್ಮಸ್ಥಳ
54.	ಇಳಕಲ್	ಥಾಣಾ
55.	ಇಳಕಲ್	ಕೊಡಗಲ್‌ತಾಂಡಾ
56.	ಇಳಕಲ್	ಬಂಡರ್‌ಗಲ್
57.	ಇಳಕಲ್	ಎಸ್. ಟಿ. ಗೋನಾಳ
58.	ಇಳಕಲ್	ಹನುಮಸಾಗರ
59.	ಇಳಕಲ್	ಚಿಕ್ಕನಾಳ
60.	ಇಳಕಲ್	ಲಿಂಗಸುಗೂರ
61.	ಇಳಕಲ್	ಹೊನ್ನಾವುರ
62.	ಇಳಕಲ್	ಚಿತ್ತರಗಿ

1	2	3
63.	ಇಳಕಲ್	ನಾಗೂರ
64.	ಇಳಕಲ್	ಕಾರವಾರ
65.	ಇಳಕಲ್	ದಾವಣಗೆರೆ

ಲಿಂಗಸ್ಗೂರು ಘಟಕದ ಮಾರ್ಗಗಳ ವಿವರ

ಕ್ರಮ ಸಂಖ್ಯೆ	ಮಾರ್ಗ	
	ಯಿಂದ	ವರೆಗೆ
1	ಲಿಂಗಸ್ಗೂರು	ಬೆಳಗಾಂವ
2.	ಲಿಂಗಸ್ಗೂರು	ಹೊಸಕೋಟೆ
3.	ಲಿಂಗಸ್ಗೂರು	ಹಟ್ಟಿಹುಬ್ಬಳ್ಳಿ
4.	ಲಿಂಗಸ್ಗೂರು	ಮುದ್ದೇಬಿಹಾಳ
5.	ಲಿಂಗಸ್ಗೂರು	ಬಿಜಾಪುರ
6.	ಲಿಂಗಸ್ಗೂರು	ನಾಗರಹಾಳ
7.	ಲಿಂಗಸ್ಗೂರು	ನಾಗರಹಾಳ
8.	ಲಿಂಗಸ್ಗೂರು	ಹಟ್ಟಿಹುಬ್ಬಳ್ಳಿ
9.	ಲಿಂಗಸ್ಗೂರು	ಹಟ್ಟಿಹುಬ್ಬಳ್ಳಿ
10.	ಲಿಂಗಸ್ಗೂರು	ನಾರಾಯಣಪುರ
11.	ಲಿಂಗಸ್ಗೂರು	ಹಟ್ಟಿ
12.	ಲಿಂಗಸ್ಗೂರು	ತಿಂಥಿಣಿ
13.	ತಿಂಥಿಣಿ	ಲಿಂಗಸ್ಗೂರ
14.	ಲಿಂಗಸ್ಗೂರ	ಉದಗೀರ
15.	ಉದಗೀರ್	ಲಿಂಗಸ್ಗೂರ
16.	ಲಿಂಗಸ್ಗೂರ	ರಾಯಚೂರು
17.	ಲಿಂಗಸ್ಗೂರ	ಮರಗತ್ನಾಳ
18.	ಲಿಂಗಸ್ಗೂರ	ಬಸವಸಾಗರ
19.	ಬಸವಸಾಗರ	ಲಿಂಗಸ್ಗೂರ
20.	ಲಿಂಗಸ್ಗೂರು	ಪಾಮನಕೆಲ್ಲೂರು
21.	ಪಾಮನಕೆಲ್ಲೂರು	ಲಿಂಗಸ್ಗೂರು
22.	ಲಿಂಗಸ್ಗೂರ	ಮದಗಲ್
23.	ಮದಗಲ್	ಲಿಂಗಸ್ಗೂರು
24.	ಲಿಂಗಸ್ಗೂರು	ತಲೆಖಾನ್
25.	ತಲೆಖಾನ್	ಲಿಂಗಸ್ಗೂರು
26.	ಲಿಂಗಸ್ಗೂರು	ಐದಭಾವಿ
27.	ಐದಭಾವಿ	ಲಿಂಗಸ್ಗೂರು

1	2	3
28.	ಲಿಂಗಸ್ಗೂರು	ಅನವಾರಿ
29.	ಅನವಾರಿ	ಲಿಂಗಸ್ಗೂರು
30.	ಲಿಂಗಸ್ಗೂರ	ರಾಮತ್ನಾಳ್
31.	ರಾಮತ್ನಾಳ್	ರಾಮತ್ನಾಳ್
32.	ಲಿಂಗಸ್ಗೂರು	ಹಟ್ಟಿ
33.	ಲಿಂಗಸ್ಗೂರ	ತಾವರೆಗೇರಾ
34.	ತಾವರೆಗೇರಾ	ಲಿಂಗಸ್ಗೂರು
35.	ಲಿಂಗಸ್ಗೂರು	ಕವಿತಾಳ
36.	ಕವಿತಾಳ	ಲಿಂಗಸ್ಗೂರು
37.	ಲಿಂಗಸ್ಗೂರ	ಮುದಗಲ್
38.	ಮುದಗಲ್	ಲಿಂಗಸ್ಗೂರು
39.	ಲಿಂಗಸ್ಗೂರ	ಮರಕಮದಿನ್ನಿ
40.	ಮರಕಮದಿನ್ನಿ	ಲಿಂಗಸ್ಗೂರು
41.	ಲಿಂಗಸ್ಗೂರ	ಮುದ್ದೆಬಿಹಾಳ್
42.	ಮುದ್ದೆಬಿಹಾಳ್	ಲಿಂಗಸ್ಗೂರು
43.	ಲಿಂಗಸ್ಗೂರ	ಯರಗೂಡಿ
44.	ಲಿಂಗಸ್ಗೂರ	ಕಮಲದಿನ್ನಿ
45.	ಲಿಂಗಸ್ಗೂರ	ಕರಡಿ
46.	ಲಿಂಗಸ್ಗೂರ	ಹಟ್ಟಿ
47.	ಲಿಂಗಸ್ಗೂರ	ಯಲಗಟ್ಟಾ
48.	ಯಲಗಟ್ಟಾ	ಲಿಂಗಸ್ಗೂರು
49.	ಲಿಂಗಸ್ಗೂರ	ಪಿ. ಕೆ. ಮರಡಿ
50.	ಲಿಂಗಸ್ಗೂರ	ಜಾಲಹಳ್ಳಿ
51.	ಜಾಲಹಳ್ಳಿ	ಲಿಂಗಸ್ಗೂರು
52.	ಲಿಂಗಸ್ಗೂರ	ಚಿತ್ತಾಪುರ
53.	ಚಿತ್ತಾಪುರ	ಲಿಂಗಸ್ಗೂರು
54.	ಲಿಂಗಸ್ಗೂರ	ಕಮಲದಿನ್ನಿ
55.	ಲಿಂಗಸ್ಗೂರ	ಬೋಗೆನೂರು
56.	ಬೋಗಪುರ	ಲಿಂಗಸ್ಗೂರು
57.	ಲಿಂಗಸ್ಗೂರ	ಮುಂಡರಗಿ
58.	ಲಿಂಗಸ್ಗೂರ	ಕೂಡಲಸಂಗಮ
59.	ಲಿಂಗಸ್ಗೂರ	ಅಮರವಾಡಗಿ
60.	ಲಿಂಗಸ್ಗೂರ	ಚಿಕ್ಕಹರಸೂರು
61.	ಲಿಂಗಸ್ಗೂರ	ಸಜ್ಜಲಗುಡ್ಡಾಬೆಂಗಳೂರು

1	2	3
62.	ಬೆಂಗಳೂರು	ಲಿಂಗಸ್ಗೂರು
63.	ಲಿಂಗಸ್ಗೂರ	ಧರ್ಮಸ್ಥಳ
64.	ಧರ್ಮಸ್ಥಳ	ಲಿಂಗಸ್ಗೂರು
65.	ಲಿಂಗಸ್ಗೂರು	ಹಟ್ಟಿಬೆಂಗಳೂರು
66	ಬೆಂಗಳೂರು	ಲಿಂಗಸ್ಗೂರು
67	ಲಿಂಗಸ್ಗೂರು	ಮುದಗಲ್‌ಬೆಂಗಳೂರು
68	ಲಿಂಗಸ್ಗೂರು	ಲಿಂಗಸ್ಗೂರು
69	ಲಿಂಗಸ್ಗೂರು	ಬೆಂಗಳೂರು
70	ಬೆಂಗಳೂರು	ಲಿಂಗಸ್ಗೂರು
71	ಲಿಂಗಸ್ಗೂರು	ಸಿಂಧ್ದನೂರು
72	ಲಿಂಗಸ್ಗೂರು	ಸಿಂಧನೂರು
73	ಲಿಂಗಸ್ಗೂರು	ಸಿಂಧನೂರು
74	ಲಿಂಗಸ್ಗೂರು	ಸಿಂಧನೂರು
75	ಲಿಂಗಸ್ಗೂರು	ಸಿಂಧನೂರು
76	ಲಿಂಗಸ್ಗೂರು	ಬಳ್ಳಾರಿ
77	ಲಿಂಗಸ್ಗೂರು	ಗುಲ್ಬರ್ಗಾ
78	ಲಿಂಗಸ್ಗೂರು	ಬಿಜಾಪುರ
79	ಲಿಂಗಸ್ಗೂರು	ಅಧೋನಿ
80	ಲಿಂಗಸ್ಗೂರು	ಹುಬ್ಬಳ್ಳಿ
81	ಹುಬ್ಬಳ್ಳಿ	ಲಿಂಗಸ್ಗೂರು
82	ಲಿಂಗಸ್ಗೂರು	ಗುಲ್ಬರ್ಗಾ
83	ಗುಲ್ಬರ್ಗಾ	ಲಿಂಗಸ್ಗೂರು
84	ಲಿಂಗಸ್ಗೂರು	ಮುದಗಲ್
85	ಮುದಗಲ್	ಬೆಂಗಳೂರು
86	ಲಿಂಗಸ್ಗೂರು	ಬೆಂಗಳೂರು
87	ಬೆಂಗಳೂರು	ಲಿಂಗಸ್ಗೂರು
88	ಲಿಂಗಸ್ಗೂರು	ಶಿವಮೊಗ್ಗ
89	ಶಿವಮೊಗ್ಗ	ಲಿಂಗಸ್ಗೂರು
90	ಲಿಂಗಸ್ಗೂರು	ಶ್ರೀಶೈಲಂ
91	ಶ್ರೀಶೈಲಂ	ಲಿಂಗಸ್ಗೂರು
92	ಲಿಂಗಸ್ಗೂರು	ರಾಯಚೂರುಹುಬ್ಬಳ್ಳಿ
93	ಹುಬ್ಬಳ್ಳಿ	ರಾಯಚೂರುಲಿಂಗಸ್ಗೂರು
94	ಲಿಂಗಸ್ಗೂರು	ಹೈದರಾಬಾದ್

ಅನುಬಂಧ

ಕುಷ್ಟಗಿ ಘಟಕದ ಮಾರ್ಗಗಳ ವಿವರ

ಕ್ರಮ ಸಂಖ್ಯೆ	ಮಾರ್ಗ	
	ಯಿಂದ	ವರೆಗೆ
1	2	3
1	ಕುಷ್ಟಗಿ	ರಾಮಪುರ
2.	ಕುಷ್ಟಗಿ	ಮುದ್ದಲಗುಂಡಿ
3.	ಕುಷ್ಟಗಿ	ಸಿಂಧನೂರುಕೊಪ್ಪಳ
4.	ಕುಷ್ಟಗಿ	ದೋಟಿಹಾಳ
5.	ಕುಷ್ಟಗಿ	ಬಾದಾಮಿ
6.	ಕುಷ್ಟಗಿ	ಗುಡೂರು
7.	ಕುಷ್ಟಗಿ	ಸಿಂಧನೂರುಮುದೇನೂರು
8.	ಕುಷ್ಟಗಿ	ಬೇಲೂರು
9.	ಕುಷ್ಟಗಿ	ಲಿಂಗಸ್ಗೂರುಗಂಗಾವತಿ
10.	ಕುಷ್ಟಗಿ	ವಡ್ರಕಲ್
11.	ಕುಷ್ಟಗಿ	ಬಳ್ಳಾರಿಬಿಜಾಪುರ
12.	ಕುಷ್ಟಗಿ	ಗಂಗಾವತಿ ಯರಗೆರಾ
13.	ಕುಷ್ಟಗಿ	ಮಾದಾಪುರ
14.	ಕುಷ್ಟಗಿ	ಕೊಪ್ಪಳಬಾಗಲ್‌ಕೋಟೆ
15.	ಕುಷ್ಟಗಿ	ತಾವರಗೇರಾಹುಬ್ಬಳ್ಳಿ
16.	ಕುಷ್ಟಗಿ	ಇಳಕಲ್
17.	ಕುಷ್ಟಗಿ	ಹುಬ್ಬಳ್ಳಿಸಿಂಧನೂರು
18.	ಕುಷ್ಟಗಿ	ಹನುಮಸಾಗರಗಜೇಂದ್ರಗಡ
19.	ಕುಷ್ಟಗಿ	ಕಿಡದೂರು
20.	ಕುಷ್ಟಗಿ	ಕೊಪ್ಪಳಬೆಂಗಳೂರು
21.	ಕುಷ್ಟಗಿ	ಹನುಮನ್ನಾಳ
22.	ಕುಷ್ಟಗಿ	ಗುಡಿಸಾಲ
23.	ಕುಷ್ಟಗಿ	ಇಳಕಲ್‌ತೊನಸಿಹಾಳ
24.	ಕುಷ್ಟಗಿ	ಮಸ್ತಿಕಟಿ
25.	ಕುಷ್ಟಗಿ	ಜಮಖಂಡಿ
26.	ಕುಷ್ಟಗಿ	ಇಳಕಲ್‌ಹುಬ್ಬಳ್ಳಿ
27.	ಕುಷ್ಟಗಿ	ಬಾಗಲ್‌ಕೋಟೆ
28.	ಕುಷ್ಟಗಿ	ಸಿಂಧನೂರುಹುಬ್ಬಳ್ಳಿ
29.	ಕುಷ್ಟಗಿ	ಮಂಗಳೂರು
30.	ಕುಷ್ಟಗಿ	ಬೆಂಗಳೂರು

1	2	3
31.	ಕುಷ್ಟಗಿ	ಗಜೇಂದ್ರಗಡ
32.	ಕುಷ್ಟಗಿ	ಮಂತ್ರಾಲಯ
33.	ಕುಷ್ಟಗಿ	ಕೊಪ್ಪಳಬೆಂಗಳೂರು
34.	ಕುಷ್ಟಗಿ	ಗಂಗಾವತಿ
35.	ಕುಷ್ಟಗಿ	ಬೆಂಗಳೂರು
36.	ಕುಷ್ಟಗಿ	ಕೊಪ್ಪಳಗಂಗಾವತಿ

ಶ್ರೀ ದೊಡ್ಡನ ಗೌಡ ಗುಂಡನ ಗೌಡ ಪಾಟೀಲ್(ಹುನಗುಂದ) : ಮಾನ್ಯ ಅಧ್ಯಕ್ಷರೆ ಉತ್ತರವನ್ನು ಒದಗಿಸಿದ್ದಾರೆ. ಹುನಗುಂದ, ಲಿಂಗಸೂರು ಹಾಗೂ ಕುಷ್ಟಗಿ ತಾಲ್ಲೂಕುಗಳ ಅನೇಕ ಹಳ್ಳಿಗಳು ಇಂದಿಗೂ ಸಾರಿಗೆ ಸೌಲಭ್ಯ ಪಡೆದುಕೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದರೆ, ಲಿಂಗಸೂರು ಮತ್ತು ಕುಷ್ಟಗಿ ತಾಲ್ಲೂಕುಗಳಲ್ಲಿ ರಸ್ತೆ ಸರಿಯಿಲ್ಲದ ಕೆಲವು ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಲು ಸಾಧ್ಯವಾಗಿರುವುದಿಲ್ಲವೆಂದೂ ಉತ್ತರ ಕೊಟ್ಟಿದ್ದಾರೆ. ಸ್ವತಂತ್ರ್ಯ ಬಂದು 58 ವರ್ಷಗಳನ್ನು ಕಳೆದರೂ ಕೂಡ ಇವತ್ತು ನಮಗೆ ರಸ್ತೆ ಸಂಪರ್ಕ ಇಲ್ಲ. ಬಸ್ಸಿನ ಸೌಕರ್ಯ ಇಲ್ಲ. ನನ್ನ ಹುಟ್ಟಿದ ಊರು ರಾಯಚೂರು ಜಿಲ್ಲೆಯ ಲಿಂಗಸೂಗುರು ತಾಲ್ಲೂಕಿನ ಕೊನೆಯ ಹಳ್ಳಿ ಹಿರೆಲಕ್ಯಾಳ ಗ್ರಾಮ ಕೊಪ್ಪಳ ಮತಕ್ಷೇತ್ರದ ಕುಷ್ಟಗಿ ಕ್ಷೇತ್ರದಲ್ಲಿ ಆ ಗ್ರಾಮ ಬರುತ್ತದೆ. ಇವತ್ತಿನವರೆಗೆ ನನ್ನ ಗ್ರಾಮಕ್ಕೆ ರಸ್ತೆ ಇಲ್ಲ. ಹಾಗೆಯೆ ಬಸ್ಸಿನ ಸೌಕರ್ಯ ಕೂಡ ಇಲ್ಲ. ಆದ್ದರಿಂದ ಮಾನ್ಯ ಸಚಿವರಲ್ಲಿ ಈ ಸಂದರ್ಭದಲ್ಲಿ ಕೇಳಿಕೊಳ್ಳುವುದೇನೆಂದರೆ, ಅಲ್ಲಿ ಯೋಗ್ಯವಾದ ರಸ್ತೆ ಮಾಡಿಸಿ ಬಸ್ಸಿನ ಸೌಕರ್ಯಗಳನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮಾತನಾಡುತ್ತಾ ನಮಗೆ ಸ್ವಾತಂತ್ರ್ಯ ಸಿಕ್ಕಿ 58 ವರ್ಷಗಳಾಗಿದ್ದರೂ ರಸ್ತೆಗಳೂ ಹಲವಾರು ಕಡೆ ಇಲ್ಲ ಎಂದು ಹೇಳಿರತಕ್ಕಂಥದ್ದನ್ನು ನಾನೂ ಸಹ ಒಪ್ಪಿಕೊಳ್ಳುತ್ತೇನೆ. ನಾವು ನೀವು ಕೂಡಿಕೊಂಡು ಈ ಕೆಲಸ ಮಾಡಬೇಕಾಗುತ್ತದೆ. ಇವತ್ತು ಕೆಎಸ್ಆರ್‌ಟಿಸಿ ಬಸ್ ಅಲ್ಲಿಗೆ ಹೋಗಬೇಕಾದರೆ ರಸ್ತೆಯ ಅವಶ್ಯಕತೆ ಇರುತ್ತದೆ ಇದನ್ನು ನಾನೂ ಸಹ ಒಪ್ಪಿಕೊಳ್ಳುತ್ತೇನೆ. ಹಿರೆಲಕ್ಯಾಳಹಳ್ಳಿಯಲ್ಲಿ ರಸ್ತೆ ಇಲ್ಲವೆಂದು ತಾವು ಹೇಳಿದ್ದೀರಿ. ಆದ್ದರಿಂದ ಅಲ್ಲಿ ರಸ್ತೆ ಇಲ್ಲದೆ ಇರುವುದರಿಂದ ಬಸ್ ಹೋಗುವುದಿಲ್ಲವೆಂದು ನಾವು ಹೇಳಿದ್ದೇವೆ. ಆ ರಸ್ತೆ ಪಿ. ಡಬ್ಲ್ಯೂ. ಡಿ. ಅಥವಾ ಜಿಲ್ಲಾ ಪಂಚಾಯತ್‌ಗೆ ಸೇರುತ್ತದೆಯೇ ಎನ್ನತಕ್ಕಂಥದ್ದು ನನಗೆ ಈಗ ಗೊತ್ತಿಲ್ಲ. ಸಂಬಂಧಪಟ್ಟವರ ಜೊತೆಯಲ್ಲಿ ಮಾತನಾಡಿ ಆ ರಸ್ತೆಯನ್ನು ಆದಷ್ಟು ಬೇಗ ಮಾಡುವುದಕ್ಕೆ ಹೇಳಿ, ಆ ರಸ್ತೆ ಆದನಂತರ ಬಸ್‌ನ್ನು ಅಲ್ಲಿಗೆ ಬಿಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ : ಯಾವಾಗ ಮಾಡಲಾಗುತ್ತದೆ ಎಂಬುದನ್ನು ಈಗಲೇ ಹೇಳಿ.

ಶ್ರೀ ಆರ್. ವಿ. ದೇಶಪಾಂಡೆ : ಮೊದಲು ಅಲ್ಲಿ ರಸ್ತೆ ಆಗಬೇಕು. ಆ ರಸ್ತೆ ಪಿ.ಡಬ್ಲ್ಯೂ.ಡಿ. ಅಥವಾ ಜಿಲ್ಲಾಪಂಚಾಯತ್‌ಗೆ ಸೇರುತ್ತದೆ ಎಂಬುದನ್ನು ತಿಳಿದುಕೊಂಡು.

ಶ್ರೀ ಹೆಚ್.ಆಂಜನೇಯ : ಯಾವಾಗ ಮಾಡಿಕೊಡುತ್ತೀರೆಂದು ಅವರು ಕೇಳುತ್ತಿದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ : ಆದಷ್ಟು ಬೇಗನೆ ರಸ್ತೆ ಮಾಡುವುದಕ್ಕೆ ಹೇಳಬಾರದು.

ಶ್ರೀ ಹೆಚ್. ಆಂಜನೇಯ : ಹಾಗಾದರೆ, ಆ ರಸ್ತೆ ಆಗುವುದಿಲ್ಲ ಮತ್ತೆ ಬಸ್ ಕೂಡ ಹೋಗುವುದಿಲ್ಲ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಮಾನ್ಯ ಎಸ್.ಎಲ್. ಧರ್ಮೇಗೌಡರದು. ಇದು ಏನಾಗಿದೆ ಎಂದರೆ, ಇದನ್ನು ಯಾವತ್ತು, ಯಾವ ಗಂಟೆಗೆ ಮಾಡಲಾಗುತ್ತದೆಂದು ಕೇಳಿದರೆ ಹೇಗೆ?

ಶ್ರೀ ಗೋವಿಂದ್ ಎಂ. ಕಾರಜೋಳ್ : ಸ್ವಾತಂತ್ರ್ಯ ಬಂದು 57 ವರ್ಷವಾಗಿದ್ದರೂ ಬಸ್ ಸೌಕರ್ಯ ಕೊಟ್ಟಿಲ್ಲ ಎಂದರೆ ಹೇಗೆ?

ಅಧ್ಯಕ್ಷರು : ಪ್ರಜಾಪ್ರಭುತ್ವ ಎಂದರೆ ಇದೇ ಸ್ವಾಮಿ. ನಾವು ಇರುವುದೇ ಹೀಗೆ ಎಂದು ಒಂದು ಸಿನಿಮಾ ಬಂದಿದೆಯಲ್ಲಾ, ಪ್ರಜಾಪ್ರಭುತ್ವ ಎಂದರೆ ಹೀಗೆಯೇ ಇದು ಎಲ್ಲಾ ನಡೆದುಕೊಂಡು ಬಂದಿರತಕ್ಕಂಥದ್ದೇ ಮಾನ್ಯ ಧರ್ಮೇಗೌಡರೇ, ತಮ್ಮ ಪ್ರಶ್ನೆಯನ್ನು ಕೇಳಿ.

ಬೀರೂರು ಕ್ಷೇತ್ರದಲ್ಲಿ ಮೀನುಗಾರಿಕೆ ಕೆರೆಗಳ ಅಭಿವೃದ್ಧಿ.

635 (6318) ಶ್ರೀ ಧರ್ಮೇಗೌಡ ಎಸ್. ಎಲ್.(ಬೀರೂರು) : ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ, ಹಣಕಾಸು, ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೀರೂರು ವಿಧಾನ ಸಭಾ ಕ್ಷೇತ್ರದ ಐಯ್ಯನಕೆರೆ ಸಮೀಪದಲ್ಲಿನ ಮೀನುಗಾರಿಕೆ ಇಲಾಖೆಗೆ ಸೇರಿದ ಅನೇಕ ಕೆರೆ, ತೊಟ್ಟಿಗಳು ಅನೇಕ ವರ್ಷಗಳಿಂದ ಅನುಪಯುಕ್ತವಾಗಿ, ಮೀನುಗಾರಿಕೆ ಚಟುವಟಿಕೆಯೇ ಸ್ಥಗಿತ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಈ ಕ್ಷೇತ್ರದಲ್ಲಿ ಮೀನುಗಾರಿಕೆಗೆ ಉತ್ತಮ ಅವಕಾಶಗಳಿದ್ದು, ಈ ಸರ್ಕಾರ ನಿಟ್ಟಿನಲ್ಲಿ ಸರ್ಕಾರ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೇಕೆ;

ಇ. ಈ ಕ್ಷೇತ್ರದಲ್ಲಿ ಕೆರೆಗಳನ್ನು ಅಭಿವೃದ್ಧಿಪಡಿಸಿ, ಮೀನುಗಾರಿಕೆಯನ್ನು ಪ್ರೋತ್ಸಾಹಿಸಲು ಇರುವ ತೊಂದರೆಗಳೇನು, ಮುಂದೆ ಯಾವ ರೀತಿಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ?

ಧರ್ಮಸಿಂಗ್‌ರವರ ಪರವಾಗಿ ಶ್ರೀ ಪಿ. ಜಿ. ಆರ್. ಸಿಂಧ್ಯ
(ಹಣಕಾಸು ಮತ್ತು ಕೈಗಾರಿಕಾ ಸಚಿವರು)

ಅ. ಬೀರೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯು ಐಯ್ಯನಕೆರೆಯಲ್ಲಿ ಮತ್ತು ಸಮೀಪದ ಮೀನುಮರಿ ಕೇಂದ್ರದಲ್ಲಿ ಮೀನುಗಾರಿಕೆ ಚಟುವಟಿಕೆ ಸ್ಥಗಿತಗೊಂಡಿರುವುದಿಲ್ಲ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಮೀನುಗಾರರ ಸಹಕಾರ ಸಂಘ, ಹುಲಿಕೆರೆ, ಸಖರಾಯಪಟ್ಟಣ ಇವರಿಗೆ ಕಳೆದ 8 ವರ್ಷಗಳಿಂದ ಐಯ್ಯನ ಕೆರೆಯ ಮೀನು